ಪ್ರ-330 (100)

**ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರ ನಿಯಮ-330ಕ್ಕೆ ಉತ್ತರ ಒದಗಿಸುವ ಕುರಿತು.**

**ವಿಷಯ:**

ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲಾ ತರಗತಿಗಳ ವಿದ್ಯಾರ್ಥಿ ಅನುಪಾತವನ್ನು ಗುಣಮಟ್ಟದ ಶಿಕ್ಷಣ ನೀಡಲು ಪ್ರಸ್ತುತ 70:1ರ ಬದಲಾಗಿ 40:1 ರಂತೆ ನಿಗಧಿಪಡಿಸುವ ಬಗ್ಗೆ ಹಲವಾರು ಸಭೆಗಳಲ್ಲಿ ಚರ್ಚಿಸಲಾಗಿದೆ. ಈಗಾಗಲೇ ಆದರ್ಶ ಪಬ್ಲಿಕ್ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ಶಾಲೆ, ಮುರಾರ್ಜಿ ವಸತಿ ಶಾಲೆಗಳು, ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ 40:1 ರಂತೆ ನಿಗದಿಗೊಳಿಸಿ ಆದೇಶ ಮಾಡಲಾಗಿರುತ್ತದೆ. ಇದರಿಂದ ಸದರಿ ಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದ್ದು ಉತ್ತಮ ಫಲಿತಾಂಶವನ್ನು ನೀಡುತ್ತಿವೆ. ಆದ್ದರಿಂದ ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ವಿದ್ಯಾರ್ಥಿಗಳ ಅನುಪಾತವನ್ನು 40:1ಕ್ಕೆ ನಿಗದಿಪಡಿಸಬೇಕೆಂಬ ಬಗ್ಗೆ ಪ್ರಸ್ತಾಪಿಸಲಾಗಿದೆ.

**ಉತ್ತರ:**

ಸರ್ಕಾರದ ಆದೇಶ ಸಂಖ್ಯೆ:ಇಡಿ 69 ಎಲ್ ಬಿ ಪಿ 2011 ದಿ:01.04.2011ರನ್ವಯ ಸರ್ಕಾರಿ ಪ್ರೌಢಶಾಲೆಗಳಲ್ಲಿ ಸಿಬ್ಬಂಧಿ ಸ್ವರ ವಿನ್ಯಾಸವನ್ನು ರಚಿಸಲಾಗಿದೆ.

| ಕ್ರಮ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ | ಪರಿಗಣಿಸಬೇಕಾದ ವಿಭಾಗ |
|---|---|---|
| 1 | 70 ರವರೆಗೆ | 1-ವಿಭಾಗ |
| 2 | 71-140 | 2-ವಿಭಾಗ |
| 3 | 141-210 | 3-ವಿಭಾಗ |
| 4 | 211-280 | 4-ವಿಭಾಗ |
| 5 | 281-350 | 5-ವಿಭಾಗ |

ಅನುದಾನಿತ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಅನುಪಾತವನ್ನು ಶಿಕ್ಷಣ ಕಾಯ್ದೆ ನಿಯಮಗಳು ಮತ್ತು ಸಿಬ್ಬಂಧಿ ರಚನಾ ವಿನ್ಯಾಸದ ಪ್ರಕಾರ ಪ್ರತಿ ಅನುದಾನಿತ ಶಾಲೆಗೆ 7+1 ಬೋಧಕ ಹುದ್ದೆಗಳನ್ನು ನಿಗಧಿಪಡಿಸಲಾಗಿದೆ. 5 ವಿಭಾಗಗಳಿಗಿಂದ ಹೆಚ್ಚು ವಿಭಾಗಗಳು ಹೊಂದಿರುವ ಶಾಲೆಗಳಿಗೆ ಶಿಕ್ಷಕರ ಅನುಪಾತ 1.5 ರಲ್ಲಿ ಶಿಕ್ಷಕರನ್ನು ನೀಡಲಾಗುತ್ತಿದೆ.

ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಶಿಕ್ಷಕರ ವಿದ್ಯಾರ್ಥಿಗಳ ಅನುಪಾತವನ್ನು 1:50ಕ್ಕೆ ಇಳಿಸಲು ಹಾಗೂ 70ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳಿದ್ದಲ್ಲಿ ಮತ್ತೊಂದು ವಿಭಾಗವನ್ನು ತೆರೆಯಲು ಅವಕಾಶ ಕಲ್ಪಿಸುವ ಪ್ರಸ್ತಾವನೆಗೆ ಸಹಮತಿ ನೀಡುವ ಬಗ್ಗೆ ಪರಿಶೀಲಿಸಲು ಸಿಬ್ಬಂದಿ ಮಾದರಿಯ ರಚನೆಯಂತೆ ವಿಷಯವಾರು ಶಿಕ್ಷಕರ ಅಗತ್ಯತೆಯನ್ನು ಹಾಗೂ ಮೂಲ ಭೂತ ಸೌಕರ್ಯಗಳನ್ನು ಒಳಗೊಂಡಂತೆಯು ವಿಸ್ತ್ರುತವಾದ ವರದಿ ಹಾಗೂ ತಿದ್ದುಪಡಿಯಿಂದ ಉದ್ಭವಿಸಬಹುದಾದ ಹೆಚ್ಚು ವಿಭಾಗಗಳನ್ನು ಮಂಜೂರು ಮಾಡಬೇಕಾದ ಹುದ್ದೆಗಳ ಸಂಖ್ಯೆ ಅಥವಾ ಹೊಂದಾಣಿಕೆ ಮಾಡಿಕೊಳ್ಳಬಹುದಾದ ಶಿಕ್ಷಕರ ಸಂಖ್ಯೆ ಇದಕ್ಕೆ ತಗಲಬಹುದಾದ ಆರ್ಥಿಕ ಹೊರೆಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಆಯುಕ್ತಾಲಯಗಳಿಗೆ ತಿಳಿಸಲಾಗಿದೆ.

ಸಂಖ್ಯೆ:ಇಪಿ 155 ಎಸ್‌ಇಎಸ್ 2021

(ಎಸ್.ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು